ಭಾನುವಾರ 17.08.2025 ಬೆಂಗಳೂರು ಗ್ರಾಮಾಂತರ ಬೆಲೆ: 5ರೂ, 2 ಪುಟಗಳು ಸಂಪುಟ 01 - ಸಂಚಿಕೆ 26 Digital Varthe Kannada Daily Volume 01 - Issue 26 Sunday 17.08.2025 Price: 5/- Rs 2 Pages Bangalore Rural

DIGITAL VARTHE

www.digitalvarthe.com

# ಡಿಜಿಟಲ್ ವಾರ್ತೆ

RNI: KNKAN/25/A1348 ಕನ್ನಡಿಗರ ಶಕ್ತಿ ಕನ್ನಡ ದಿನಪತ್ರಿಕೆ

ಅಭಿಷೇಕ್ ಚಿಕ್ಕಮಾರನಹಳ್ಳಿ
ಸಂಪಾದಕರು

ಪುರುಷೋತ್ತಮ್ ಬಿ.ಹೆಚ್
ವ್ಯವಸ್ಥಾಪಕರು

digitalvarthe@gmail.com

## ನಮ್ಮ ಕುಟುಂಬದ ಖಾಸಗಿತನವನ್ನು ಗೌರವಿಸಿ: ನಟ ಅಜಯ್ ರಾವ್



ಬೆಂಗಳೂರು: ಸ್ಯಾಂಡಲ್‌ವುಡ್ ನಟ ಅಜಯ್ ರಾವ್ ದಾಂಪತ್ಯದಲ್ಲಿ ಬಿರುಕು ಮೂಡಿದ್ದು, ದಂಪತಿ ವಿಚ್ಛೇದನಕ್ಕೆ ಮುಂದಾಗಿದ್ದಾರೆ ಎನ್ನುವ ಸುದ್ದಿ ಕೇಳಿಬಂದಿದೆ. ಇತ್ತೀಚೆಗಷ್ಟೇ ಯುದ್ಧಕಾಂಡ 2 ಸಿನಿಮಾ ನಿರ್ಮಿಸಿ, ನಟಿಸಿದ್ದ ನಟ ಅಜಯ್ ರಾವ್ ಅವರು ಸಾಕಷ್ಟು ಸಾಲ ಮಾಡಿಕೊಂಡಿದ್ದು, ಅವರ ಸಂಸಾರದಲ್ಲಿ ಬಿರುಕು ಮೂಡಿದೆ ಎನ್ನುವ ಮಾತುಗಳು ಕೇಳಿಬಂದಿದ್ದವು. ಇದಕ್ಕೆ ಸ್ಪಷ್ಟನೆ ನೀಡಿದ್ದ ನಟ, ಅದೆಲ್ಲ ಸುಳ್ಳು ಎಂದಿದ್ದರು.

### ನಟ ಅಜಯ್ ರಾವ್ ಪತ್ನಿ ಸ್ವಪ್ನಾ ದೂರು – ವಿಚ್ಛೇದನಕ್ಕೆ ತಿರುವು ಪಡೆದ ಸಂಬಂಧ

ಈ ಸೂಕ್ಷ್ಮ ಸಮಯದಲ್ಲಿ ನಮ್ಮ ಕುಟುಂಬದ ಖಾಸಗಿತನವನ್ನು ಗೌರವಿಸುವಂತೆ ಹಾಗೂ ವ್ಯಯಕ್ತಿಕ ವಿಷಯಗಳಿಗೆ ಸಂಬಂಧಿಸಿದ ಯಾವುದೇ ಸುದ್ದಿಯನ್ನು ಹಂಚಿಕೊಳ್ಳುವುದನ್ನು ಅಥವಾ ಹರಡುವುದನ್ನು ದೂರವಿಡುವಂತೆ ತಮ್ಮನ್ನು ವಿನಂತಿಸುತ್ತೇನೆ. ಪ್ರತಿಯೊಂದು ಕುಟುಂಬವೂ ಸವಾಲುಗಳನ್ನು ಎದುರಿಸುತ್ತದೆ. ಅವುಗಳನ್ನು ಖಾಸಗಿಯಾಗಿ ಉಳಿಯುವಂತೆ ಸಹಕರಿಸಿ ಎಂದು ವಿನಂತಿಸಿದ್ದಾರೆ. ನಿಮ್ಮ ಮನವೊಲಿಕೆ, ಬೆಂಬಲ ಮತ್ತು ವಿವೇಕ ನಮಗೆ ಅತ್ಯಂತ ಮುಖ್ಯ ಎಂದು ಸಾಮಾಜಿಕ ಜಾಲತಾಣದಲ್ಲಿ ಅಜೇಯ್ ರಾವ್ ಪೋಸ್ಟ್ ಮಾಡಿದ್ದಾರೆ.

ಅಜಯ್ ರಾವ್ ಹಾಗೂ ಸ್ವಪ್ನಾ ಪ್ರೀತಿಸಿ ಮದುವೆಯಾಗಿದ್ದರು. 2014ರಲ್ಲಿ ಹೊಸೇಪಟೆಯಲ್ಲಿ ಅವರ ವಿವಾಹ ನಡೆದಿತ್ತು. ದಂಪತಿಗೆ ಓರ್ವ ಮಗಳಿದ್ದು, 11 ವರ್ಷಗಳ ದಾಂಪತ್ಯ ಜೀವನಕ್ಕೆ ಇದೀಗ ಅಂತ್ಯ ಹಾಡುವುದು ಬಹುತೇಕ ಖಚಿತವಾಗಿದೆ ಎನ್ನಲಾಗುತ್ತಿದೆ. ಸದ್ಯಕ್ಕೆ ವಿಚ್ಛೇದನಕ್ಕೆ ಕಾರಣ ಏನೆಂಬುದು ತಿಳಿದು ಬಂದಿಲ್ಲ. ನಟ ಅಜಯ್ ರಾವ್ ವಿರುದ್ಧ ಅವರ ಪತ್ನಿ ಸಪ್ನಾ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಡಿ ದೂರು ದಾಖಲಿಸಿದ್ದು, ಮಗಳು ಕೂಡ ಅಜಯ್ ರಾವ್ ವಿರುದ್ಧ ದೂರು ದಾಖಲಿಸಿದ್ದಾರೆ ಎನ್ನಲಾಗುತ್ತಿದೆ.

2003ರಲ್ಲಿ ತೆರೆಕಂಡ ಪ್ರೇಮ್ ನಿರ್ದೇಶನದ 'ಎಕ್ಸ್‌ಕ್ಯೂಸ್ ಮೀ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದ ಅಜಯ್ ರಾವ್, 'ತಾಜ್ ಮಹಲ್', 'ಪ್ರೇಮ್ ಕಹಾನಿ', 'ಕೃಷ್ಣನ್ ಲವ್ ಸ್ಟೋರಿ', 'ಕೃಷ್ಣನ್ ಮ್ಯಾರೇಜ್ ಸ್ಟೋರಿ', 'ಕೃಷ್ಣ-ಲೀಲಾ' ಸೇರಿದಂತೆ ಹಲವು ಹಿಟ್ ಸಿನಿಮಾಗಳಲ್ಲಿ ನಟಿಸಿದ್ದರು. ಇದೇ ವರ್ಷ ತೆರೆಕಂಡ ಯುದ್ಧಕಾಂಡ 2 ಸಿನಿಮಾವನ್ನು ನಿರ್ಮಿಸುವುದರ ಜೊತೆಗೆ ನಟಿಸಿದ್ದರು. ಆದರೆ, ಚಿತ್ರಕ್ಕೆ ಅಂದುಕೊಂಡಷ್ಟು ಯಶಸ್ಸು ಸಿಕ್ಕಿರಲಿಲ್ಲ. ಈ ಚಿತ್ರಕ್ಕೆ ಸಾಕಷ್ಟು ಹಣ ಸುರಿದಿದ್ದಾಗಿ ಸ್ವತಃ ಅಜಯ್ ರಾವ್ ಅವರೇ ಹೇಳಿದ್ದರು.




## ಯುವ ಜನರು ದೇಶವನ್ನು ಕಟ್ಟುವ ವೀರ ಸೇನಾನಿಗಾಳಗಬೇಕು: ರಾಜ್ಯ ಪ್ರಶಸ್ತಿ ವಿಜೇತ ಆನಂದ್ ಸಿ ತಿರುಮಲ ಅಭಿಮತ



### 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ: ಆನಂದ್ ಸಿ ತಿರುಮಲ ಅಭಿಮತ

ಬೆಂಗಳೂರು: ಪ್ರತಿಯೊಬ್ಬ ಯುವ ಜನರು ದೇಶವನ್ನು ಕಟ್ಟುವ ವೀರ ಸೇನಾನಿಗಾಳಗಬೇಕು ರಾಷ್ಟ್ರದ ಗೌರವ ಕಾಪಾಡಬೇಕು ಎಂದು ರಾಜ್ಯ ಪ್ರಶಸ್ತಿ ವಿಜೇತ ರಾಜ್ಯ ಯುವ ಜನ ಸಭಾ ಅಧ್ಯಕ್ಷ ಆನಂದ್ ಸಿ ತಿರುಮಲ ಹೇಳಿದರು.

ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ ತಮ್ಮನಾಯಕನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ 79ನೇ ಸ್ವತಂತ್ರ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿ ಬ್ರಿಟಿಷರು ಸಾಂಬಾರು ಪದಾರ್ಥಗಳ ವ್ಯಪಾರಕ್ಕಾಗಿ ಭಾರತ ದೇಶಕ್ಕೆ ಬಂದು ತಮ್ಮ ಅಸ್ತಿತ್ವ ವನ್ನು ರಾಜಕೀಯವಾಗಿ ಬೆಳಸಿಕೊಂಡು ಇಡೀ ದೇಶವನ್ನು ತಮ್ಮ ಹಿಡಿತದಲ್ಲಿ ತೆಗೆದುಕೊಂಡು ಸುಮಾರು ವರ್ಷಗಳ ಕಾಲ ದೇಶವನ್ನು ಆಳ್ವಿಕೆ ಮಾಡಿ ಸಂಪತ್ತು ಲೂಟಿ ಮಾಡಿದ್ದರು ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಭಾರತದ ಉದ್ದಗಲಕು ಸ್ವಾತಂತ್ರ ಸಂಗ್ರಾಮ ದ ಹೋರಾಟ ಪಲವಾಗಿ ಅನೇಕ ವೀರ ಯೋಧರು ಬಲಿದಾನ ಮಾಡಿ ಇಂದು ದೇಶಕ್ಕೆ ಸ್ವತಂತ್ರ ದಿನವನ್ನು ಬಹಳ ಸಂಭ್ರಮ ದಿಂದ ಆಚರಣೆ ಮಾಡುತ್ತಿರುವುದು ವಿಶೇಷ ವಾಗಿದೆ ಎಂದು ಹೇಳಿದರು.

ಗ್ರಾಮ ಪಂಚಾಯತ್ ಸದಸ್ಯರು ವಕೀಲರು ಆದ ಶ್ರೀಮತಿ ಡಿ ರೇಣುಕಾ ಮಾತನಾಡಿ ಇಂದಿನ ಯುವ ಜನತೆ ದೇಶದ ಆಸ್ತಿ ನಮ್ಮ ಭಾರತ ದೇಶಕ್ಕೆ ಬ್ರಿಟಿಷರಿಂದ ಸ್ವತಂತ್ರ ಸಿಕ್ಕಿ 79ವರ್ಷ ಆಚರಣೆ ಯಲ್ಲಿ ಇದ್ದೇವೆ ಆಧುನಿಕ ಜಗತ್ತು ಬಹಳ ವೇಗವಾಗಿ ಬೆಳೆಯುತ್ತಿದೆ ಮನುಷ್ಯನ ರೂಪದಲ್ಲಿ ರೋಬೋಟ್ ಗಳು ಜಗತ್ತಿಗೆ ಕಾಲು ಇಡುತ್ತಿವೆ ನಾವು ಎಷ್ಟೇ ಮುಂದುವರೆದರು ಸಹ ಮಾನವೀಯತೆ ಕಳೆದುಕೊಳಬಾರದು ಈ ನಿಟ್ಟಿನಲ್ಲಿ ಒಳ್ಳೆ ನಾಗರೀಕ ರಾಗಿ ದೇಶದ ಸಾರ್ವಭೌಮ ವನ್ನು ಕಾಪಾಡಬೇಕು ಎಂದು ಹೇಳಿದರು,

ಸರ್ಕಾರಿ ಶಾಲಾ ಮುಖ್ಯ ಶಿಕ್ಷಕ ಮಾಜರ್ ಖಾನ್ ಮಾತನಾಡಿ ಒಬ್ಬರೇ ಅತಿಥಿ ಶಿಕ್ಷಕರ ಸಹಕಾರ ದಿಂದ ನನ್ನ ಅವಧಿಯಲ್ಲಿ ಶಾಲೆಯಲ್ಲಿ ಬಹಳ ಬದಲಾವಣೆ ತಂದಿದ್ದೇವೆ ಪಠ್ಯ ದ ಜೊತೆಗೆ ವಿಶೇಷ ಕೌಶಲ್ಯ ತರಬೇತಿ ನೀಡುತ್ತಿದ್ದೇವೆ ಮಕ್ಕಳನ್ನು ಇತರೇ ಕಲಿಕಾ ಚಟುವಟಿಕೆ ಯಲ್ಲಿ ತೊಡಗಿಸಿ ಒಳೆ ವಿದ್ಯಾರ್ಥಿಗಳಬೇಕು ಇವತ್ತು ಸ್ವತಂತ್ರ ದಿನಾಚರಣೆ ಪ್ರಯುಕ್ತ ರಾಜ್ಯ ಪ್ರಶಸ್ತಿ ವಿಜೇತರು ಆನಂದ್ ಸಿ ತಿರುಮಲ ಮತ್ತು ಗ್ರಾಮ ದ ಯುವಕರು ಮಕ್ಕಳಿಗೆ ಬ್ಯಾಗ್ ನೋಟ್ ಬುಕ್ಸ್ ಕಲಿಕಾ ಸಮಗ್ರಿ ಗಳನ್ನು ತಂದು ಕೊಟ್ಟರು ಗ್ರಾಮದ ಜನತೆಗೆ ಅಭಿನಂದನೆಗಳು ತಿಳಿಸುತ್ತೇನೆ ನಮ್ಮಗೆ ಈ ವಿಶೇಷ ದಿನ ಬಹಳ ಆನಂದ ತಂದಿದ್ದೆ ಎಂದು ಹೇಳಿದರು. ಇನ್ನು ಕಾರ್ಯಕ್ರಮದಲ್ಲಿ ಶ್ರೀಮತಿ ರೇಣುಕಾ, ವಕೀಲರು, ಸದಸ್ಯರು ಇಂಡ್ಲವಾಡಿ ಗ್ರಾಮ ಪಂಚಾಯತ್ ,ಆನಂದ್ ಸಿ ತಿರುಮಲ ರಾಜ್ಯ ಪ್ರಶಸ್ತಿ ವಿಜೇತರು,ಪತ್ರಕರ್ತರು, ರಾಜ್ಯ ಯುವ ಜನ ಸಭಾ ಅಧ್ಯಕ್ಷರು, ಬಿ ಬಸವರಾಜು ಸದಸ್ಯರು, ಮುನಿರಾಜು ನಿರ್ದೇಶಕರು ಸರ್ಕಾರಿ ನ್ಯಾಯ ಬೆಲೆ ಅಂಗಡಿ, ಯುವ ಮುಖಂಡರಾದ ಆರ್ ಡಿ ವಿಶ್ವನಾಥ್, ಎಸ್, ಪ್ರಕಾಶ್, ಚಂದ್ರಪ್ಪ , ಸಿ ಫೀಲ್ಡ್ ಆಫೀಸ್ರ್ ರ್ ಪಂಜಾಬ್ ನ್ಯಾಷನಲ್ ಬ್ಯಾಂಕ್,ಆನಂದ್ ಬಾಬು, ಟಿ ಆರ್ ಸುನೀಲ್ ಕುಮಾರ್, ಕಾಶೀನಾಥ್ ಮೋಹನ್ ಕುಮಾರ್ ಅಧ್ಯಾಪಕರು, ಶಿವು, ಪ್ರಕಾಶ್, ಮುನಿರಾಜು, ಎಸ್ ಡಿ ಎಂ ಸಿ ಅಧ್ಯಕ್ಷರು, ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

## ನೆಲಮಂಗಲದಲ್ಲಿ ಲಾರಿಗೆ ಕೆಎಸ್ಸಾರ್ಟಿಸಿ ಬಸ್ ಡಿಕ್ಕಿ: ಮೂವರ ಸಾವು



ನೆಲಮಂಗಲ ತಾಲೂಕಿನ ಗುಂಡೇನಹಳ್ಳಿ ಗ್ರಾಮದ ಬಳಿ ಕುರಿ, ಮೇಕೆ ತುಂಬಿದ್ದ ಲಾರಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಮೂವರು ಮೃತಪಟ್ಟಿದ್ದಾರೆ. ಲಾರಿಯಲ್ಲಿದ್ದ ಸೀನಪ್ಪ(50), ನಜೀರ್ ಅಹ್ಮದ್(36), ಆನಂದ್(42) ಮೃತಪಟ್ಟವರು. ನೆಲಮಂಗಲ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುರಿ, ಮೇಕೆ ತುಂಬಿಕೊಂಡು ಮುಧೋಳದಿಂದ ತುಮಕೂರು ಮಾರ್ಗವಾಗಿ ಬೆಂಗಳೂರು ಕಡೆಗೆ ಲಾರಿ ಸಂಚರಿಸುತ್ತಿದ್ದಾಗ ಟೈರ್ ಪಂಕ್ಚರ್ ಆಗಿದ್ದರಿಂದ ರಸ್ತೆ ಬದಿ ನಿಲ್ಲಿಸಲಾಗಿತ್ತು. ಆ ಲಾರಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಲಾರಿ ನಜ್ಜುಗುಜ್ಜಾಗಿದೆ. ಸ್ಥಳಕ್ಕೆ ನೆಲಮಂಗಲ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.

ಬೆಂಗಳೂರಿನ ಹೆಸರಘಟ್ಟ ಸಮೀಪದ ತೋಟಗೆರೆಯಲ್ಲಿ ಮರಕ್ಕೆ ಕಾರು ಡಿಕ್ಕಿಯಾಗಿ ಮೂವರಿಗೆ ಗಂಭೀರ ಗಾಯಗಳಾಗಿವೆ. ಸ್ಥಳಕ್ಕೆ ಚಿಕ್ಕಬಾಣಾವರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

